1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 09.10.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw- 9 Pw-12

ಹೆಸರು ಃ ಸೌಮ್ಯ
ತಂದೆಯ ಹೆಸರು ಃ ಗಂಗಯ್ಯ
ವಯಸ್ಸು ಃ 32 ವರ್ಷ
ಉದ್ಯೋಗ ಃ ಡಬ್ಲ್ಯೂ ಪಿಸಿ 18, ಡಿವೈಎಸ್‌ಪಿ ಕಛೇರಿ ಚನ್ನಪಟ್ಟಣ
ವಾಸಸ್ಥಳ ಃ ಚನ್ನಪಟ್ಟಣ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಮೇ 2022 ರಿಂದ ಚನ್ನಪಟ್ಟಣ ಡಿವೈಎಸ್‌ಪಿ ಕಛೇರಿಯಲ್ಲಿ ಡಬ್ಲ್ಯೂ ಪಿಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 13.08.2023 ರಂದು ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 138/2023 ರಲ್ಲಿ ತನಿಖಾಧಿಕಾರಿಗಳ ಜೊತೆ ಮಹಜರ್ ಕ್ರಮ ಜರುಗಿಸಲು ವಾಡೆದೊಡ್ಡಿ, ಕನಕಪುರ ತಾಲ್ಲೂಕಿಗೆ ಹೋಗಿದ್ದು, ಈ ಪ್ರಕರಣದ ತನಿಖಾಧಿಕಾರಿಯಾದ ಡಿವೈಎಸ್‌ಪಿ ರವರು ಮಹಜರ್ ಕ್ರಮ ಜರುಗಿಸುತ್ತಿದ್ದಂತಹ ಸಮಯದಲ್ಲಿ ಅವರ ಆದೇಶದ ಅನ್ವಯ ಛಾಯಾ ಚಿತ್ರಗಳನ್ನು ತೆಗೆದು ಅದಕ್ಕೆ ಸಂಬಂಧಿಸಿದಂತೆ

ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 165ಬಿ ರನ್ವಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 165ಬಿ ರನ್ವಯ ಪ್ರಮಾಣ ಪತ್ರವನ್ನು ಸಹ ಸಾಕ್ಷಿ ನೋಡಿ ಗುರುತಿಸಿದ್ದು, ಅದು ನಿಶಾನೆ ಪಿ 13 ಇದ್ದು, ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು ನಿಶಾನೆ ಪಿ 13(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಃ

ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು. ಆರೋಪಿ ಪರ ವಕೀಲರು ಗೈರು ಹಾಜರಿರುತ್ತಾರೆ. ಆರೋಪಿಯನ್ನು ಕೇಳಲಾಗಿ ಆತ ತನ್ನ ವಕೀಲರು ತನ್ನ ಮೊಬೈಲ್ ಕರೆಯನ್ನು ಸ್ವೀಕರಿಸುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿಯನ್ನು ಯಾರೂ ಪ್ರತಿನಿಧಿಸದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಂ.ಪಂಚಾಕ್ಷರಿ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/

ವಿಶೇಷ ನ್ಯಾಯಾಧೀಶರು,
ರಾಮನಗರ.